

ದಪ್ಪನೆಯ ಕಾಲುಗಳಿಗೆ ಕಷಾಯ ಸ್ನಾನ

# ಆಯಾಸದಿಂದ ಅನಾಯಾಸದೆಡೆ

## ಆನೆಕಾಲು ರೋಗಿಗಳ ನಡೆ

**ಭಾರತದ ಮೂಲೆ ಮೂಲೆಗಳಿಂದ ಹಾಗೂ ಕೊಲ್ಲಿ ದೇಶಗಳಿಂದಲೂ ಇಲ್ಲಿಗೆ ಆಗಮಿಸಿದ ಫೈಲೇರಿಯಾ ರೋಗಿಗಳು ಗುಣಮುಖರಾಗಿ ಹಿಂದಿರುಗಿದ್ದಾರೆ. ಈಗ ರೋಗಿಗಳ ಸಂಖ್ಯೆ ಹೆಚ್ಚಿದೆ. ನೋಂದಾವಣೆಯ ನಂತರ ಚಿಕಿತ್ಸೆಗಾಗಿ ಕನಿಷ್ಟ ಮೂರು ತಿಂಗಳ ಕಾಲ ರೋಗಿಗಳು ಕಾಯಬೇಕಾಗಿದೆ.**

■ ಚಿತ್ರ, ಬರಹ:
ರವಿಶಂಕರ ದೊಡ್ಡಮಾಣಿ

**ಕಳೆದ ಇಪ್ಪತ್ತು ವರ್ಷಗಳಿಂದ ಅನ್ನಪೂರ್ಣಮ್ಮ ತಮ್ಮ ಮಣಭಾರದ ಕಾಲನ್ನು ಎಳೆದು ನಡೆದಾಡುವುದು ನಡೆದೇ ಇತ್ತು.**

ಇತ್ತೀಚೆಗೆ ರಕ್ತದ ಅಧಿಕ ಒತ್ತಡವೂ ಸಮಸ್ಯೆಯಾಗಿದೆ.
ಈ ಸಮಸ್ಯೆಗಳೇ ಬೆಟ್ಟದಷ್ಟಾಗಿದ್ದಾಗ ಅವರನ್ನು ಮತ್ತೆರಡು ಖಾಯಿಲೆಗಳು ಹಿಂಬಾಲಿಸಿದವು.

ಕತ್ತಿನಿಂದ ಜೋಲಾಡುವ ರೋಗವಾದ ಗಳಗಂಡ (ಗೋಯಿಟರ್) ಮೊದಲನೆಯುದ್ದು;


ಕಣ್ಣಿನ ಶಕ್ತಿ ಕಡಿಮೆಯಾಗಿ ಜನರ ಗುರುತು ಸಿಗದೇ ಇದ್ದದ್ದು ಎರಡನೆಯದ್ದು.
ಅನಿವಾರ್ಯವಾಗಿ ಶಸ್ತ್ರ ಚಿಕಿತ್ಸೆಯ ಮೂಲಕ ಗಂಟಲನ್ನು ಆವರಿಸಿದ್ದ ಗಳಗಂಡವನ್ನು ನಿವಾರಿಸಿದ್ದರೂ ನಿತ್ಯ ಔಷಧಿ ತೆಗೆದುಕೊಳ್ಳಲೇ ಬೇಕಾಗಿತ್ತು.

“

**....ಆದರೆ ಎಲ್ಲಕ್ಕಿಂತ ಹೆಚ್ಚು ಅವರನ್ನು ಬಾಧಿಸುವುದು ಫೈಲೇರಿಯಾ ಬಾಧಿಸಿದ ಕಾಲು...’**

ಅನ್ನಪೂರ್ಣಮ್ಮನ ದೈಹಿಕ ಸಮಸ್ಯೆಗಳನ್ನು ಅವರ ಪತಿ ಪುರುಷೋತ್ತಮ್ ನಮ್ಮೆದುರು ಹೀಗೆ ತೆರೆದಿಡುತ್ತಿದ್ದರು.





ಒಂದು ತಿಂಗಳಿನಲ್ಲಿ ಅನ್ನಪೂರ್ಣಮ್ಮ ಕಾಲುಗಳಲ್ಲಿ ಉಂಟಾದ ಪ್ರಗತಿ

**ಫೈಲೇರಿಯಾ ಅಥವಾ ಆನೆಕಾಲು ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಲಿಂಫೇಟಿಕ್ ಫೈಲೇರಿಯಾಸಿಸ್ ಖಾಯಿಲೆಗೆ ಪರಿಣಾಮಕಾರಿಯಾದ ಚಿಕಿತ್ಸೆಯನ್ನು ನೀಡುವ ಪ್ರಪಂಚದ ಅತ್ಯಪೂರ್ವ ಕೇಂದ್ರಗಳಲ್ಲಿ ಕಾಸರಗೋಡಿನ ಕೋಟೆಕಣಿಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಪ್ಲೈಡ್ ಡರ್ಮಟೋಲಜಿ (ಐಎಡಿ)ಯೂ ಒಂದು.**

ಕಳೆದ ಜೂನ್ ತಿಂಗಳ ಕೊನೆಯಲ್ಲಿ ಆಂಧ್ರಪ್ರದೇಶದ ನರಸಾಪುರ ಜಿಲ್ಲೆಯಿಂದ ತಾಸುಗಟ್ಟಲೆ ಪ್ರಯಾಣಿಸಿ ಕಾಸರಗೋಡಿಗೆ ಬಂದಿದ್ದ ಅನ್ನಪೂರ್ಣಮ್ಮನ ಕಥೆ ಎಂಥವರ ಕರುಳನ್ನೂ ಹಿಂಡುವಂತಿತ್ತು.

ಫೈಲೇರಿಯಾ ಅಥವಾ ಆನೆಕಾಲು ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಲಿಂಫೇಟಿಕ್ ಫೈಲೇರಿಯಾಸಿಸ್ ಖಾಯಿಲೆಗೆ ಪರಿಣಾಮಕಾರಿಯಾದ ಚಿಕಿತ್ಸೆಯನ್ನು ನೀಡುವ ಪ್ರಪಂಚದ ಅತ್ಯಪೂರ್ವ ಕೇಂದ್ರಗಳಲ್ಲಿ ಕಾಸರಗೋಡಿನ ಕೋಟೆಕಣಿಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಪ್ಲೈಡ್ ಡರ್ಮಟೋಲಜಿ (ಐಎಡಿ)ಯೂ ಒಂದು. ಎಐಡಿ ಕಚೇರಿಯಲ್ಲಿ ಕುಳಿತು ಅನ್ನಪೂರ್ಣಮ್ಮನ ಕಥೆಯನ್ನು ನಾವು ದಾಖಲಿಸಿಕೊಳ್ಳುತ್ತಿದ್ದರೆ ಹೊರಗೆ ಆನೆಕಾಲು ರೋಗದ ನಿವಾರಣೆಗಾಗಿ ದೇಶದ ವಿವಿಧೆಡೆಯಿಂದ ಬಂದು ಕಾದು ಕುಳಿತ ಜನರ ದೊಡ್ಡ ಕ್ಯೂ ಇತ್ತು. ಎಲರ್ಲದ್ದೂ ಒಂದೊಂದು ಕಥೆ..

ನರಸಾಪುರದ ಬಳಿಯಲ್ಲಿ ರೈಲ್ವೇ ಇಲಾಖೆ ಉದ್ಯೋಗಿಯಾಗಿದ್ದ ಪುರುಷೋತ್ತಮ್ ತಮ್ಮ ಬಂಧುವರ್ಗದಲ್ಲಿ ಅನಾಥೆಯಾಗಿದ್ದ ಅನ್ನಪೂರ್ಣಮ್ಮನವರನ್ನು ವಿವಾಹವಾಗಿ ಆದರ್ಶ ಮೆರೆದಿದ್ದರು. ತಮ್ಮ ಐದು ಮಂದಿ ಮಕ್ಕಳ ಜತೆ ಸಂತೃಪ್ತ ಜೀವನ ನಡೆಸುತ್ತಿದ್ದ ಅವರ ಬಾಳಿನ ಕಹಿದಿನಗಳು ಆರಂಭವಾದದ್ದು 1988ರಲ್ಲಿ. ಒಂದು ದಿನ ಅಚಾನಕ್ಕಾಗಿ ಅನ್ನಪೂರ್ಣಮ್ಮನಿಗೆ ವಿಪರೀತ ಜ್ವರ ಆರಂಭವಾಯಿತು. ಪಕ್ಕದ ಬೀದಿಯಲ್ಲಿದ್ದ ಅಲೋಪತಿಕ್ ಡಾಕ್ಟರನ್ನು ಭೇಟಿಯಾದರು. ಮಾತ್ರೆ ನುಂಗಿದರೂ ಜ್ವರ ಕಡಿಮೆಯಾಗಲಿಲ್ಲ. ಬಲದ ಕಾಲು ಕೆಂಪಗಾಯಿತು. ಜೊತೆಗೆ ವಿಪರೀತ ನೋವು. ವಾರದ ನಂತರ ಜ್ವರ ಕಡಿಮೆಯಾಯಿತು. ಆದರೆ ಕಾಲು ನಿಧಾನವಾಗಿ ಬಾತುಕೊಳ್ಳಲಾರಂಭಿಸಿತು.

ಅಲೋಪತಿಯಲ್ಲಿ ಗುಣ ಕಾಣದಾದಾಗ, ಆಯುರ್ವೇದ, ಹೋಮಿಯೋಪತಿ, ಯುನಾನಿ.. ಹೀಗೆ ನರಸಾಪುರದಲ್ಲಿರುವ ಬಹುತೇಕ ಎಲ್ಲಾ ವೈದ್ಯರನ್ನೂ ಭೇಟಿಯಾಗಿ ಚಿಕಿತ್ಸೆ ಪಡೆದರು. ಯಾವುದೂ ಫಲಕಾರಿಯಾಗಲಿಲ್ಲ. ಕೊನೆಗೂ ವೈದ್ಯರೊಬ್ಬರು ಅನ್ನಪೂರ್ಣಮ್ಮನಿಗೆ ಬಾಧಿಸಿದ ಖಾಯಿಲೆ ಫೈಲೇರಿಯಾ ಎಂದು ಗುರುತಿಸಿ; 'ಇದಕ್ಕೆ ಪರಿಣಾಮಕಾರಿಯಾದ ಚಿಕಿತ್ಸೆ ಸಾಧ್ಯವಿಲ್ಲ' ಎಂದು ಕೈಚೆಲ್ಲಿದರು. ಅನ್ನಪೂರ್ಣಮ್ಮನವರಿಗೆ ಆಕಾಶವೇ ತಲೆ ಮೇಲೆ ಬಿದ್ದಂತಾಯಿತು. ನಂತರ ತಿಂಗಳಿಗೊಮ್ಮೆ ಜ್ವರ ಬರುವುದು ಮಾಮೂಲಾಯಿತು. ಅಲೋಪತಿ ಮಾತ್ರೆಗಳನ್ನು ತಿಂದು ಜ್ವರವನ್ನು ಹತೋಟಿಗೆ ತಂದುಕೊಳ್ಳುತ್ತಿದ್ದರು. ಆದರೆ ಬಲಗಾಲಿನ ಅಧಿಕ ಭಾರ ಮತ್ತು ಅಸಹನೀಯ ವೇದನೆ ಅವರನ್ನು ಅತಿಯಾಗಿ ಕಾಡುತ್ತಿತ್ತು.

ಕಂಗಾಲಾದ ಪುರುಷೋತ್ತಮ್ ಪತ್ನಿಯ ಜೊತೆ ಹೈದರಾಬಾದ್‌ನ ಖ್ಯಾತ ಆಯುರ್ವೇದ ನಾಟಿ ವೈದ್ಯರೊಬ್ಬರನ್ನು ಭೇಟಿಯಾದರು. ಹದಿನೈದು ದಿನಗಳಿಗೊಮ್ಮೆ 450 ಕಿ.ಮೀ ಪ್ರಯಾಣ ಮಾಡಿ ಔಷಧಿ ತರುತ್ತಿದ್ದರು. ಔಷಧಿಯ ಪರಿಣಾಮವಾಗಿ ಕಾಲು ಬಾತುಕೊಳ್ಳುವುದು ನಿಯಂತ್ರಣಕ್ಕೆ ಬಂತೇ ಹೊರತು ಮೂಲ ಸ್ಥಿತಿಗೆ ಬರಲಿಲ್ಲ. ಅಷ್ಟರಲ್ಲಿ ಮದ್ದು ನೀಡುವ ವೈದ್ಯರು ಅಸುನೀಗಿದರು. 'ಅವರ ಕೋಣೆ ತುಂಬಾ ನಾಟಿ ಮದ್ದುಗಳಿದ್ದವು. ಅವರ ಜೊತೆ ಸಹಾಯಕರು ಯಾರೂ ಇದ್ದಿರಲಿಲ್ಲ. ಹಾಗಾಗಿ ಆ ಔಷಧಿಯನ್ನು ಮುಂದುವರಿಸಲಾಗಲಿಲ್ಲ' ಎನ್ನುತ್ತಾ ತುಂಬಿದ ಕಣ್ಣಾಲಿಗಳನ್ನು ಪುರುಷೋತ್ತಮ್ ಒರೆಸಿಕೊಂಡರು.

'ಅಂತರ್ಜಾಲದಲ್ಲಿ ದೊರೆತ ಮಾಹಿತಿಯ ಆಧಾರದಲ್ಲಿ ಇಲ್ಲಿಗೆ ಬಂದಿದ್ದೇವೆ. ಇದು ನಮ್ಮ ಕೊನೆಯ ಪ್ರಯತ್ನ, ದೂರವಾಣಿಯ ಮೂಲಕ ಸಂಪರ್ಕಿಸಿ ನಮ್ಮ ಹೆಸರನ್ನು ನೋದಾಯಿಸಿದ್ದೇವೆ' ಎಂದು ಒಂದಷ್ಟು ಹಸನ್ಮುಖರಾದರು.

ಐಎಡಿಯಲ್ಲಿ ಚಿಕಿತ್ಸೆಗಾಗಿ ದಾಖಲಾಗುವಾಗ 63 ವರ್ಷ ಪ್ರಾಯದ ಅನ್ನಪೂರ್ಣಮ್ಮ 65 ಕೆ.ಜಿ ತೂಗುತ್ತಿದ್ದರು. ಅವರ ಕಾಲು 11600 ಘನ ಸೆಂಟಿಮೀಟರ್ ಗಾತ್ರವನ್ನು ತಲಪಿದ್ದವು. ಬಲಗಾಲಿನ ಚರ್ಮ ವಿಪರೀತ ಮಡಿಕೆಗಳಾಗಿ ಸುಕ್ಕುಗಟ್ಟಿದ್ದವು. ಐಎಡಿಯ ವೈದ್ಯರ ಪ್ರಾಥಮಿಕ ಪರೀಕ್ಷೆ ಪ್ರಕಾರ ರೋಗ ತನ್ನ ಮೂರನೇ ಹಂತವನ್ನು ತಲಪಿತ್ತು.

**(ಪುಟ 46 ನೋಡಿ)**



ಪುರುಷೋತ್ತಮ್, ಅನ್ನಪೂರ್ಣಮ್ಮ ಮೊಗದಲ್ಲಿ ಸಂತಸ

(35ನೇ ಪುಟದಿಂದ)



ಡಾ. ಎಸ್.ಆರ್. ನರಹರಿ, ಡಾ. ಪ್ರಸನ್ನ ನರಹರಿ, ಡಾ. ಕೆ.ಎಸ್. ಬೋಸ್, ಡಾ. ಗುರುಪ್ರಸಾದ್ ಅಗ್ಗಿತ್ತಾಯ



ಕಾಸರಗೋಡಿನ ಕೋಟೆ ಕಣಿಯಲ್ಲಿರುವ ಐಎಡಿ ಸಂಸ್ಥೆಯ ಕಚೇರಿ

**ಹೆಮ್ಮೆಯ ಕೇಂದ್ರ:**

ಅಲೋಪತಿ, ಆಯುರ್ವೇದ, ಯೋಗ ಮತ್ತು ಹೋಮಿಯೋಪತಿಗಳನ್ನು ಸಂಯೋಜಿಸುವ ಉದ್ದೇಶದಿಂದ 1998ರಲ್ಲಿ ಆರಂಭವಾದ ಐಎಡಿ ಕನ್ನಡಿಗರ ಹೆಮ್ಮೆಯ ಕೇಂದ್ರ. ಕಾಸರಗೋಡಿನಲ್ಲಿ ಕನ್ನಡ ನಿಧಾನವಾಗಿ ಮೂಲೆ ಸೇರುತ್ತಿದ್ದರೂ ಐಎಡಿಯಲ್ಲಿ ಈಗಲೂ ಕನ್ನಡ ಪ್ರಾಬಲ್ಯವಿದೆ. ಇಲ್ಲಿನ ಕನ್ನಡಿಗರು, ಅಗ್ರಮಾನ್ಯ ವೈದ್ಯರು ಹಾಗೂ ಚಿಂತಕರು ಸಮಾನ ಮನಸ್ಕ ಸ್ನೇಹಿತರ ಜತೆ ಸೇರಿ ಐಎಡಿಗೆ ರೂಪು ನೀಡಿದರು. ಫೈಲೇರಿಯಾ, ಬಿಳಿತೊನ್ನು ಸಹಿತ ಚರ್ಮರೋಗಗಳ ನಿವಾರಣೆ ಹಾಗೂ ಏಡ್ಸ್ ಮತ್ತಿತರ ಲೈಂಗಿಕ ಖಾಯಿಲೆಗಳಿಂದ ನೊಂದ ಮನಸ್ಸುಗಳಿಗೆ ಸಾಂತ್ವನ ನೀಡುವ ಕಡೆಗೆ ಪ್ರಧಾನವಾಗಿ ಗಮನ ಹರಿಸಲಾಯಿತು.

'ನನ್ನಲ್ಲಿಗೆ ಚಿಕಿತ್ಸೆಗಾಗಿ ಆಗಮಿಸುತ್ತಿದ್ದ ಆನೆಕಾಲು ರೋಗಿಗಳನ್ನು ಗುಣ ಪಡಿಸುವ ಯಾವ ವಿಧಾನಗಳೂ ಅಲೋಪತಿಯಲ್ಲಿ ಇರಲಿಲ್ಲ. ತುರಿಕೆ ಕಡಿಮೆ ಮಾಡುವ ಮುಲಾಮುಗಳನ್ನಷ್ಟೇ ನೀಡಲು ನನಗೆ ಸಾಧ್ಯವಾಗುತ್ತಿತ್ತು. ಆದರೆ ಅವರಲ್ಲಿ ಕೆಲವರು ಆಯುರ್ವೇದ ವೈದ್ಯರನ್ನೋ, ಹೋಮಿಯೋಪತಿ ಡಾಕ್ಟರನ್ನೋ ಭೇಟಿಯಾಗಿ ಔಷಧಿ ತೆಗೆದುಕೊಳ್ಳುತ್ತಿದ್ದರು. ಯಾವುದೂ ಪರಿಪೂರ್ಣವಾಗಿರಲಿಲ್ಲ. ಆದರೆ ಈ ವಿಚಾರ ಒಂದು ಹೊಸ ಯೋಚನೆಯನ್ನು ಮೂಡಿಸಿತು. ಈ ಮೂರೂ ಚಿಕಿತ್ಸಾ ಪದ್ಧತಿಗಳ ಜೊತೆಗೆ ಯೋಗಾಸನವನ್ನೂ ಒಂದುಗೂಡಿಸಿ ಫೈಲೇರಿಯಾವನ್ನು ಗುಣಪಡಿಸುವ ಸಂಯೋಜಿತ ಚಿಕಿತ್ಸಾ ಪದ್ಧತಿಯನ್ನು ರೂಪಿಸಿದೆವು' ಎಂದು ಖ್ಯಾತ ಚರ್ಮರೋಗ ತಜ್ಞ ಡಾ| ಎಸ್.ಆರ್. ನರಹರಿ ನೆನಪಿಸಿಕೊಳ್ಳುತ್ತಾರೆ.

ಪ್ರಾರಂಭಿಕ ಯಶಸ್ಸಿನಿಂದ ಸಂತುಷ್ಟರಾದ ಅವರು ವಿದೇಶಗಳಲ್ಲಿ ಜರಗುತ್ತಿದ್ದ ಕೆಲ ಪ್ರಮುಖ ವೈದ್ಯಕೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ತಮ್ಮ ನೂತನ ಚಿಕಿತ್ಸಾ ವಿಧಾನದ ಬಗ್ಗೆ ಪ್ರಬಂಧಗಳನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಚರ್ಮರೋಗ ವಿಭಾಗದ ಪ್ರೊಫೆಸರ್ ಟೆರೆನ್ಸ್ ಜೆ ರಯಾನ್ ಮತ್ತು ಜರ್ಮನಿಯ ಫೋಲ್ಡಿ ಕ್ಲಿನಿಕ್‌ನ ಫಿಸಿಯೋಥೆರಪಿಸ್ಟ್ ರೆಜಿನಾ ಫ್ರಾಸ್ಟರ್ ಮಾರ್ಗದರ್ಶನ ನೀಡಿದರು. ಹೀಗೆ ಔಷಧಿ ಇಲ್ಲದೆ ಕಾಡುತ್ತಿದ್ದ ಸಮಸ್ಯೆಗೆ ಭಾರತೀಯ ಮೂಲದ ಪರಿಹಾರವನ್ನು ರೂಪಿಸಲು ಸಾಧ್ಯವಾಯಿತು. ಜೊತೆಯಲ್ಲಿ ಅಂತಾರಾಷ್ಟ್ರೀಯ ಕೊಕ್ರೇನ್ ಸಂಸ್ಥೆ ಪ್ರತಿಪಾದಿಸುವ ಪರಿಪೂರ್ಣ ವೈದ್ಯಕೀಯ ಚಿಕಿತ್ಸಾ ವಿಜ್ಞಾನದ ಎಲ್ಲಾ ಆಧಾರಗಳನ್ನೂ ಪಾಲಿಸಲು ಐಎಡಿಗೆ ಸಾಧ್ಯವಾಗಿದೆ. ಸದ್ಯ ಡಾ.ಎಸ್.ಆರ್.ನರಹರಿ, ಆಯುರ್ವೇದ ವೈದ್ಯ ಡಾ. ಗುರುಪ್ರಸಾದ್ ಅಗ್ಗಿತ್ತಾಯ, ಡಾ.ಬಿನೀತಾ ಮತ್ತು ಡಾ.ಕೆ.ಎಸ್.ಬೋಸ್ ಜೊತೆಯಲ್ಲಿ ಯೋಗಾಸನ ಅಧ್ಯಾಪಕರು, ಕೌನ್ಸೆಲರ್, ವಿಶೇಷ ಪರಿಣತಿ ಪಡೆದ ದಾದಿಯರು ಹಾಗೂ ಸಂಯೋಜಕರು ಐಎಡಿಯಲ್ಲಿ ದುಡಿಯುತ್ತಿದ್ದಾರೆ.

**ಏನಿದು ಆನೆಕಾಲು?**

ಲಿಂಫೇಟಿಕ್ ಫೈಲೇರಿಯಾಸಿಸ್ ಅಂದರೆ ಪ್ರಧಾನವಾಗಿ ಕಾಲುಗಳನ್ನು ಬಾಧಿಸುವ ಖಾಯಿಲೆ. ಕಾಲಿನಲ್ಲಿರುವ ರಸವಾಹಕ ನಾಳವು (ಲಿಂಫ್ ಡಕ್ಟ್) ಶಿಥಿಲಗೊಂಡು ಲಿಂಫ್ ರಸದ ಪ್ರವಾಹವು ತಡೆಯಲ್ಪಡುತ್ತದೆ. ತನ್ಮೂಲಕ ಕಾಲಿನ ಗಾತ್ರ ಹೆಚ್ಚುತ್ತದೆ. ವಿಪರೀತ ನೋವು, ಆಗಾಗ ಕಾಡುವ ಜ್ವರ, ಕಾಲಿನಿಂದ ಒಸರುವ ಅಸಹನೀಯ ವಾಸನೆಯ ದ್ರವ ಕೂಡಾ ಈ ಖಾಯಿಲೆಯ ಲಕ್ಷಣಗಳು. ಹೆಚ್ಚಿನ ಸಂದರ್ಭಗಳಲ್ಲಿ ಪರಾನ್ನ ಜೀವಿಯೊಂದು ಕ್ಯೂಲೆಕ್ಸ್ ಜಾತಿಯ ಸೊಳ್ಳೆಯ ಮೂಲಕ ಆನೆಕಾಲು ರೋಗವನ್ನು ಹರಡುತ್ತದೆ. ಉಳಿದಂತೆ ಕೆಲವರಿಗೆ ಈ ಖಾಯಿಲೆ ಜನ್ಮಜಾತವಾಗಿ ಅಂಟಿಕೊಳ್ಳುತ್ತದೆ. ಇನ್ನು ಕೆಲವರಿಗೆ ಶಸ್ತ್ರಚಿಕಿತ್ಸೆಗಳ ಅಡ್ಡ ಪರಿಣಾಮವಾಗಿ ಕಾಲುಗಳು ಬಾತುಕೊಳ್ಳುತ್ತವೆ. ಈ ಸಮಸ್ಯೆಗೆ ಸಾಮಾನ್ಯವಾಗಿ ಲಿಂಫೆಡೆಮಾ ಎಂದು ಹೆಸರು. ಈ ಯಾವುದೇ ರೀತಿಯಲ್ಲಿ ಬಾಧಿಸಿದ ಲಿಂಫೆಡೆಮಾಕ್ಕೆ ಪರಿಣಾಮಕಾರಿ ಚಿಕಿತ್ಸೆ ನೀಡಲು ಐಎಡಿಗೆ ಸಾಧ್ಯವಾಗಿದೆ.

ಸಾಂಕ್ರಾಮಿಕ ರೋಗವಾದ್ದರಿಂದ ಆನೆಕಾಲು ರೋಗ ಬಾಧಿಸಲ್ಪಟ್ಟವರನ್ನೆಲ್ಲ ಸಮಾಜ ಕಡೆಗಣಿಸುತ್ತಿದೆ. ಯಾರಲ್ಲೂ ಹೇಳಲಾರದ, ಮಾನಸಿಕ ನೆಮ್ಮದಿಯನ್ನು ಪಡೆಯಲಾಗದ ಸಮಸ್ಯೆಯಾಗಿ ಈ ಖಾಯಿಲೆ ರೋಗಿಗಳನ್ನು ಪೀಡಿಸುತ್ತದೆ. ಆಫ್ರಿಕಾ, ದಕ್ಷಿಣ ಏಷ್ಯಾ ಪೆಸಿಫಿಕ್ ಮತ್ತು ಭಾರತೀಯ ಉಪಖಂಡದಲ್ಲಿ ಈ ಖಾಯಿಲೆ ವ್ಯಾಪಕವಾಗಿ ಹರಡುತ್ತಿದೆ. ಭಾರತದಲ್ಲಿ ಬಿಹಾರ ಪ್ರಸ್ತುತ ಅತೀ ಹೆಚ್ಚು ಫೈಲೇರಿಯಾ ಬಾಧಿತರನ್ನು ಹೊಂದಿದೆ. ಉಳಿದಂತೆ ಬಹುತೇಕ ಕರಾವಳಿ ಭಾಗದ 15 ರಾಜ್ಯಗಳ ಸುಮಾರು ಎರಡೂವರೆ ಕೋಟಿ ಮಂದಿ ಆನೆಕಾಲು ರೋಗಕ್ಕೆ ತುತ್ತಾಗಿದ್ದಾರೆ.

ಪ್ರಸ್ತುತ ಐಎಡಿಗೆ ಸ್ವಂತ ಆಸ್ಪತ್ರೆ ಇಲ್ಲ. ಹಾಗಾಗಿ ಕಾಸರಗೋಡಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ದೂರವಾಣಿಯ ಮೂಲಕ ಮುನ್ಸೂಚನೆ ನೀಡಿ ಆಗಮಿಸಿದವರನ್ನು ಮಾತ್ರ ಚಿಕಿತ್ಸೆಗೆ ಪರಿಗಣಿಸಲಾಗುತ್ತಿದೆ. ರೋಗಿಗಳು ಆಸ್ಪತ್ರೆಯಲ್ಲಿ ಕನಿಷ್ಟ ಹದಿನೈದು ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಬೇಕು. ಮೊದಲ ದಿನ ಕಾಲಿನ ಗಾತ್ರ, ತೂಕ ಮತ್ತು ಸುತ್ತಳತೆಯನ್ನು ಲೆಕ್ಕ ಹಾಕಲಾಗುತ್ತದೆ. ಮುಂದಿನ ದಿನಗಳಲ್ಲಿ ಆಯುರ್ವೇದ ಗಿಡಮೂಲಿಕೆಗಳಿಂದ ತಯಾರಿಸಲಾದ 'ಫಾಂಟಾ' ಚೂರ್ಣ ಬೆರೆಸಿದ ನೀರಿನಲ್ಲಿ ಕಾಲುಗಳನ್ನು ತೊಳೆಯಲಾಗುವುದು. ಕಂಪ್ರೆಷನ್ ಬ್ಯಾಂಡೇಜುಗಳನ್ನು ವಿಶಿಷ್ಟ ವಿಧಾನದಲ್ಲಿ ಸುತ್ತಿ ರೋಗಿಗಳಿಗೆ ವಿವಿಧ ಯೋಗಾಸನಗಳನ್ನು ತಿಳಿಸಿಕೊಡಲಾಗುವುದು.

ಪ್ರಾಣಾಯಾಮ, ವಜ್ರಾಸನಗಳ ಜೊತೆಗೆ ಗುಲ್ಫ ಚಕ್ರಾಸನ, ಗುಲ್ಫ ನಮನಾಸನಗಳನ್ನು ಜೀವನ ಪೂರ್ತಿ ಮುಂದುವರಿಸಲು ರೋಗಿಗಳಿಗೆ ಸೂಚನೆಯನ್ನು ನೀಡಲಾಗುತ್ತದೆ. ಯೋಗಾಸನ, ಮಸಾಜ್‌ಗಳ ಮೂಲಕ ತಟಸ್ಥವಾದ ಲಿಂಫ್ ನಾಳಗಳನ್ನು ಪುನಶ್ಚೇತನಗೊಳಿಸಲಾಗುತ್ತದೆ. ಆಹಾರದಲ್ಲಿ ನಿಯಂತ್ರಣ ಹೇರಲು ಪಥ್ಯದ ಕಟ್ಟುನಿಟ್ಟು ಇದೆ. ರೋಗಿಯ ಜೊತೆಯಲ್ಲಿದ್ದವರಿಗೆ ಬ್ಯಾಂಡೇಜು ಕಟ್ಟುವ ತಂತ್ರಗಾರಿಕೆ ಕಲಿಸಿಕೊಡಲಾಗುವುದು. ಆಸ್ಪತ್ರೆಯಿಂದ ಹೊರಬಂದ ಮೇಲೂ ಯೋಗಾಸನ, ಬ್ಯಾಂಡೇಜುಗಳನ್ನು ರೋಗಿಗಳು ಮುಂದುವರೆಸಬೇಕು. 'ಚಿಕಿತ್ಸಾ ಪದ್ಧತಿಯ ಕಡೆಗಿನ ರೋಗಿಗಳ ನಿಷ್ಠೆಯ ಆಧಾರದಲ್ಲಿ ಸಂಯೋಜಿತ ಚಿಕಿತ್ಸಾ ಪದ್ಧತಿಯ ಯಶಸ್ಸು ಅಡಗಿದೆ' ಎನ್ನುತ್ತಾರೆ ಸಂಸ್ಥೆಯ ಪ್ರಾಂಶುಪಾಲ ಡಾ.ಕೆ.ಎಸ್. ಬೋಸ್.

ಫೈಲೇರಿಯಾ ಪೀಡಿತರ ಮಾನಸಿಕ ನೆಮ್ಮದಿಯನ್ನು ಹೆಚ್ಚಿಸುವತ್ತ ಐಎಡಿಯಲ್ಲಿ ವಿಶೇಷ ಗಮನ ನೀಡಲಾಗುತ್ತಿದೆ. 'ದಿನದ ಬಹುಪಾಲು ಸಮಯ ರೋಗಿಗಳ ಶುಶ್ರೂಷೆಯಲ್ಲಿ ಕಳೆಯುತ್ತೇವೆ. ರಜಾದಿನಗಳಲ್ಲಿ ನನ್ನ ಮಕ್ಕಳೂ ಅವರ ಜೊತೆ ಆಟ ಆಡುತ್ತಾರೆ. ಈ ಮೂಲಕ ಸಮಾಜದಿಂದ ಬೇರ್ಪಟ್ಟ ಆ ಮನಸ್ಸುಗಳನ್ನು ನಾವು ಮತ್ತೆ ಮುಖ್ಯವಾಹಿನಿಗೆ ತರುವ ಪ್ರಯತ್ನ ಮಾಡುತ್ತೇವೆ' ಎನ್ನುತ್ತಾರೆ ಸಂಸ್ಥೆಯ ಉದ್ಯೋಗಿ ವಿವೇಕ್. ಸದ್ಯ ಕೌನ್ಸೆಲಿಂಗ್‌ನಲ್ಲಿ ಭಾಗವಹಿಸಿದ ಸುಮಾರು 860 ಮಂದಿಯಲ್ಲಿ 450 ಮಂದಿಗೆ ಮಾತ್ರ ಚಿಕಿತ್ಸೆ ನೀಡಲು ಐಎಡಿಗೆ ಸಾಧ್ಯವಾಗಿದೆ. ಕರ್ನಾಟಕ, ಲಕ್ಷದ್ವೀಪ ಸಹಿತ ಭಾರತದ ಮೂಲೆ ಮೂಲೆಗಳಿಂದ, ಗಲ್ಫ್ ದೇಶಗಳಿಂದ ಆಗಮಿಸಿದ ಫೈಲೇರಿಯಾ ರೋಗಿಗಳು ಗುಣಮುಖರಾಗಿ ಹಿಂದಿರುಗಿದ್ದಾರೆ. ಸದ್ಯ ನೋಂದಾವಣೆಯ ನಂತರ ಚಿಕಿತ್ಸೆಗಾಗಿ ಕನಿಷ್ಠ ಮೂರು ತಿಂಗಳು ಕಾಲ ರೋಗಿಗಳು ಕಾಯಬೇಕಾಗುತ್ತಿದೆ. ಸ್ವಂತ, ಸುಸಜ್ಜಿತ ಆಸ್ಪತ್ರೆಯನ್ನು ಸನಿಹದ ಉಳಿಯತ್ತಡ್ಕದಲ್ಲಿ ಕಟ್ಟುವ ಪ್ರಯತ್ನವೂ ನಡೆದಿದೆ.

ಶುಶ್ರೂಷೆಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿದ ಅನ್ನಪೂರ್ಣಮ್ಮ ಜುಲೈ 10ರಂದು ಹಿಂದಿರುಗುವಾಗ ಬಹುತೇಕ ಗುಣಮುಖರಾಗಿದ್ದರು. ಕಾಲಿನ ಗಾತ್ರ ಕೇವಲ 7500 ಘನ ಸೆಂಟಿ ಮೀಟರ್‌ಗಳಾಗಿದ್ದವು. ತೂಕ ಒಂಭತ್ತು ಕಿಲೋ ಇಳಿದು 56 ಕಿಲೋ ಗ್ರಾಂಗಳಿಗೆ ತಲಪಿತ್ತು. ಅವರ ಮನಸ್ಸಿನ ಭಾರ ಕಡಿಮೆಯಾಗಿತ್ತು. ಊರಿಗೆ ತಲುಪಿದ ನಂತರ ಯೋಗಾಸನಗಳನ್ನೂ, ಔಷಧಿಯನ್ನೂ ಮುಂದುವರೆಸುವ ವಿಶ್ವಾಸವಿತ್ತು.

ಐಎಡಿಯ ಸಂಪರ್ಕ ಸಂಖ್ಯೆ: 04994-230116 ಮತ್ತು 320471